ನಾನು ಶಪಿಸುವವನಾಗಿ ಕಳುಹಿಸಲ್ಪಟ್ಟಿಲ್ಲ. ಬದಲಾಗಿ, ನಾನು ಕರುಣೆಯಾಗಿ ಕಳುಹಿಸಲ್ಪಟ್ಟಿದ್ದೇನೆ

ಅಬೂ ಹುರೈರಾ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ: ಅವರು ಹೇಳಿದರು: (ಪ್ರವಾದಿಯವರಿಗೆ) ಹೀಗೆ ಹೇಳಲಾಯಿತು: "ಓ ಅಲ್ಲಾಹನ ಸಂದೇಶವಾಹಕರೇ, ಬಹುದೇವಾರಾಧಕರ
ವಿರುದ್ಧ ಪ್ರಾರ್ಥಿಸಿ." ಆಗ ಅವರು (ಪ್ರವಾದಿ) ಹೇಳಿದರು: "ನಾನು ಶಪಿಸುವವನಾಗಿ ಕಳುಹಿಸಲ್ಪಟ್ಟಿಲ್ಲ. ಬದಲಾಗಿ, ನಾನು ಕರುಣೆಯಾಗಿ ಕಳುಹಿಸಲ್ಪಟ್ಟಿದ್ದೇನೆ."
[صحيح] [رواه مسلم]

ಅಲ್ಲಾಹನಿಗೆ ಪಾಲುದಾರರನ್ನು ಸೇರಿಸುವವರ (ಬಹುದೇವಾರಾಧಕರ) ವಿರುದ್ಧ ಪ್ರಾರ್ಥಿಸುವಂತೆ (ಅವರನ್ನು ಶಪಿಸುವಂತೆ) ಪ್ರವಾದಿಯವರನ್ನು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಕೋರಲಾಯಿತು. ಆಗ ಅವರು ಹೇಳಿದರು: "ನಾನು ಜನರನ್ನು ಅಲ್ಲಾಹನ ಕರುಣೆಯಿಂದ ದೂರವಾಗುವಂತೆ ಮತ್ತು ಹೊರಹಾಕುವಂತೆ ಪ್ರಾರ್ಥಿಸಲು 'ಶಪಿಸುವವನಾಗಿ' ಅಲ್ಲಾಹನಿಂದ ಕಳುಹಿಸಲ್ಪಟ್ಟಿಲ್ಲ; (ಹಾಗೆ ಮಾಡಿ) ನಾನು ಅವರನ್ನು ಒಳಿತಿನಿಂದ ದೂರಗೊಳಿಸುವುದಿಲ್ಲ. ನಾನು ಇದಕ್ಕಾಗಿ ಕಳುಹಿಸಲ್ಪಟ್ಟಿಲ್ಲ. ಬದಲಾಗಿ, ನಾನು ಸಾಮಾನ್ಯವಾಗಿ ಎಲ್ಲ ಜನರಿಗೂ, ಮತ್ತು ವಿಶೇಷವಾಗಿ ಸತ್ಯವಿಶ್ವಾಸಿಗಳಿಗೆ ಒಳಿತು ಹಾಗೂ ಕರುಣೆಗೆ ಕಾರಣವಾಗಲು ಕಳುಹಿಸಲ್ಪಟ್ಟಿದ್ದೇನೆ."

http://www.sunnah.global/hadeeth/kn/show/66272